# ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

**ಉಪಸ್ಥಿತರು:- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**<u>ಸಿ.ಸಿ. ನಂಃ 341/2021</u>**

**ಫಿರ್ಯಾಧಿದಾರಃ  ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೋಲಿಸ್ ಠಾಣೆ**

**// ವಿರುದ್ದ //**

**ಆರೋಪಿ ಃ  ಶೇಕ್ರಪ್ಪ ಮತ್ತು ಇತರರು.**

**<u>ದೋಷಾರೋಪಣೆ</u>**

**<u>ಆರೋಪಿತರುಃ</u>**

1. ಶೇಕ್ರಪ್ಪ ತಂದೆ ಚಂದ್ರಾಮಪ್ಪ, ವಃ 65 ವರ್ಷ,
   ಉಃ ಒಕ್ಕಲುತನ, ಸಾಃ ಸೈದಾಪೂರ,
   ತಾಃ ಮತ್ತು ಜಿಃ ಯಾದಗರಿ.
2. ದೊಡ್ಡಸಾಬಣ್ಣ ತಂದೆ ಚಂದ್ರಾಮಪ್ಪ, ವಃ 62 ವರ್ಷ,
   ಉಃ ಒಕ್ಕಲುತನ, ಸಾಃ ಸೈದಾಪೂರ,
   ತಾಃ ಮತ್ತು ಜಿಃ ಯಾದಗರಿ.
3. ಶರಣಪ್ಪ ತಂದೆ ಚಂದ್ರಾಮಪ್ಪ, ವಃ 55 ವರ್ಷ,
   ಉಃ ಒಕ್ಕಲುತನ, ಸಾಃ ಸೈದಾಪೂರ,
   ತಾಃ ಮತ್ತು ಜಿಃ ಯಾದಗರಿ.

**<u>ಆರೋಪಿತರಾದ ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಏನೆಂದರೆ</u>**

ದಿನಾಂಕ 21.04.2021 ರಂದು ಸಂಜೆಃ 05.00 ಗಂಟೆ ಸುಮಾರಿಗೆ ಸೈದಾಪೂರ ಪೋಲಿಸ್ ಠಾಣೆ ಸರಹದ್ದಿಲ್ಲಿ ಬರುವ ಸೈದಾಪೂರ ಗ್ರಾಮದ ಚಾಸಾ-1,

4, 5 ರವರು ತಮ್ಮ ಮನೆಯ ಹತ್ತಿರ ಇರುವಾಗ ಆರೋಪಿತರು ಬಂದು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಸಹ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**2.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಆರೋಪಿತರ ಪೈಕಿ 1 ನೇ ಆರೋಪಿತನು ಚಾಸಾ-1 ರವರಿಗೆ ಕೈಯಿಂದ ಕಪಾಳಕ್ಕೆ ಹೊಡೆದಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.323 ಸಹ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**3.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾಧ ನೀವು ಅಪರಾಧ ಮಾಡವ ಸಮಾನ ಉದ್ದೇಶದಿಂದ ಆರೋಪಿತರ ಪೈಕಿ 2 ನೇ ಆರೋಪಿ ಚಾಸಾ-1 ರವರಿಗೆ ಕೂದಲು ಹಿಡಿದು ಎಳೆದಾಡಿ ಅವಮಾನ ಮಾಡಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.354 ಸಹ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**4.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾಧ ನೀವು ಅಪರಾದ ಮಾಡುವ ಸಮಾನ ಉದ್ದೇಶದಿಂದ ಆರೋಪಿತರ ಪೈಕಿ 3 ನೇ ಆರೋಪಿಯು ಚಾಸಾ-1 ರವರಿಗೆ ಈ ಸೂಳೆ ಮಗಳಿಗೆ ಸುಮ್ಮನೆ ಬಿಡಬಾರುದು ಎಲ್ಲಲ್ಲೋ ಹೋಗಿ ನಮ್ಮ ಮೇಲೆ ದೂರು ಕೊಡುತ್ತಿದ್ದಾಳೆ ಈಕೆಗೆ ಒಂದು ಗತಿ ಕಾಣಿಸ ಬಿಟ್ಟರೆ ನಮಗೆ ಕಿರಿಕಿರಿ ತಪ್ಪುತ್ತದೆ ಅಂದು ಒಮ್ಮೆಲೆ ಕಪಾಳಕ್ಕೆ ಹೊಡೆದು ಲೇ ಮಗಳೆ ನೀನು ಸುಮ್ಮನೆ ಮನೆಯಲ್ಲಿ ಇದ್ದರೆ ಸರಿ ಇಲ್ಲಂದರೆ ನಿನಗೆ ಖಲಾಸ ಮಾಡಿ

ಬಿಡುತ್ತೇವೆ ಎಂದು ಜೀವದ ಬೆದರಿಕೆ ಹಾಕಿರುತ್ತೀರಿ, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.506 ಸಹ ಕಲಂ.34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

ದಿನಾಂಕಃ **02.01.2024.**
ಸ್ಥಳಃ ಯಾದಗಿರಿ

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ಯಾದಗಿರಿ.**